# ಹಸಿವ ನೀಗುವ ಗಾರುಡಿಗ!

ಹಸಿವಿನಿಂದ ನರಳುವ ಸ್ಥಿತಿ ಜಗತ್ತಿನ ಅತ್ಯಂತ ನೋವಿನ ಸಂದರ್ಭ. ಅದಕ್ಕಿಂತ ಮಿಗಿಲಾದ ನೋವು ಮತ್ತು ಸಂಕಟಗಳು ಇರಲು ಸಾಧ್ಯವೇ ಇಲ್ಲ. ಹೊಟ್ಟೆ ತುಂಬ ತಿಂದ ಜನಕ್ಕೆ ಈ ನೋವಿನ ಅನುಭವದ ಸಂಕಟ ಎಂಥದ್ದೆಂಬುದು ಅರ್ಥವೇ ಆಗುವುದಿಲ್ಲ. ಮಧ್ಯಮ ವರ್ಗಕ್ಕಿಂತ ಮೇಲ್ಮಟ್ಟದ ಜನರು ಬಹುಪಾಲು ಹಸಿವಾಗದೇ ಹೊತ್ತು ಹೊತ್ತಿಗೆ ಉಣ್ಣುವಂಥವರು. ಇವರಿಗೆ ಊಟದ ಸಂದರ್ಭ– ಸಮಯ ಪೂರ್ವ ನಿರ್ಧರಿತವಾಗಿರುತ್ತವೆ. ಆಯಾಯ ಸಮಯದಲ್ಲಿ ಹಸಿವಾಗಿರಲಿ ಅಥವಾ ಆಗದಿರಲಿ ಸುಮ್ಮನೆ ಕೂತು ಉಂಡುಬಿಡುತ್ತಾರೆ! ಭೋಜನದ ರುಚಿ ಹೆಚ್ಚಿಸಿಕೊಳ್ಳಲು ವಿವಿಧ ಬಗೆಯ ಪೂರಕ ಖಾದ್ಯಗಳು, ನೆಂಜಿಕೆಗಳು! ಇವು ಅವರ ಸೇವನೆಯ ಪ್ರಮಾಣವನ್ನು ಹೆಚ್ಚಿಸುತ್ತವೆಯಂತೆ! ಇಂಥ ಕೆಲವರಿಗಂತು ಊಟ ಮಾಡುವುದು ಚಟವಾಗಿಬಿಡುತ್ತದೆ. ಮತ್ತೆ ಕೆಲವರಿಗಂತು ಭೋಜನದ ರೀತಿ ರಿವಾಜುಗಳು ತಮ್ಮ ಅಂತಸ್ತಿನ ತೋರಿಕೆಯ ಅಹಂಕಾರವಾಗಿಬಿಡುತ್ತದೆ. ಆದರೆ ಜಗತ್ತಿನ ಒಟ್ಟು ಜನಸಂಖ್ಯೆಯಲ್ಲಿ ಇಂಥವರ ಸಂಖ್ಯೆ ಅರ್ಧಕ್ಕಿಂತಲೂ ಕಡಿಮೆ. ಇವರ ಸುಖ ಭೋಜ್ಯ ಸಾಧಿತವಾಗಲು ಜಗತ್ತಿನ ಮೂಲೆ ಮೂಲೆಗಳಲ್ಲಿ ನೂರಾರು ಕೋಟಿ ಜನರು ದಿನದಲ್ಲಿ ಹನ್ನೆರಡು ಗಂಟೆಗೂ ಮಿಗಿಲಾಗಿ ತಮ್ಮ ಬೆವರು ಸುರಿಸುತ್ತಿರುತ್ತಾರೆ. ಈ ಅಸಮಾನತೆಯ ಅನ್ಯಾಯ ಚರಿತ್ರೆಯುದ್ದಕ್ಕೂ ನಡೆದು ಬಂದಿರುವ ವಾಸ್ತವ ಸತ್ಯ.

ಈ ಹಸಿವಿನ ನರಳಾಟ ನಮ್ಮ ಚರಿತ್ರೆಯ ಅರಿವಿಗೆ ಬಂದಿರಲಿಲ್ಲವೆಂದು ತಿಳಿಯಬೇಕಾದ್ದಿಲ್ಲ. ಬಡವರ, ದೀನರ, ಹಸಿದವರ ಪರವಾಗಿ ಮಾತನಾಡುವ ಧ್ವನಿ ಅಲ್ಲೊಂದು ಇಲ್ಲೊಂದು ಕೇಳಿಬರುತ್ತದೆ. ಆದರೆ ಆ ಧ್ವನಿ ಪ್ರಧಾನ ಧ್ವನಿಯಲ್ಲ ಅಥವಾ ಆ ಧ್ವನಿ ಇನ್ನಿತರ ಅಬ್ಬರದ ಧ್ವನಿಗಳ ನಡುವೆ ಯಾರಿಗೂ ಕೇಳುವುದಿಲ್ಲ. ಅಂಥ ಒಂದು ಧ್ವನಿಗೆ ಹಿರಿಯ ವಚನಕಾರ ದೇವರ ದಾಸಿಮಯ್ಯ ಎಲ್ಲ ಹಸಿದವರ ಸಂಕಟಕ್ಕೆ ಅಭಿವ್ಯಕ್ತಿಯನ್ನು ನೀಡುತ್ತಾನೆ:

ಹಸಿವೆಂಬ ಹೆಬ್ಬಾವು ಬಸುರ ಹಿಡಿದರೆ ವಿಷವೇರಿತ್ತಯ್ಯ ಆಪಾದ ಮಸ್ತಕಕ್ಕೆ  
ಹಸಿವಿಗನ್ನವನ್ನಿಕ್ಕಿ ವಿಷವನಿಳುಹಬಲ್ಲಡೆ ವಸುಧೆಯೊಳಗೆ  
ಆತನೆ ಗಾರುಡಿಗ ಕಾಣಾ! ರಾಮನಾಥ.

ಅಂದರೆ ದಾಸಿಮಯ್ಯನಿಗೆ ಚರಿತ್ರೆ ಮಾಡಿರುವ ಅನ್ಯಾಯದ ಬಗ್ಗೆ ಸ್ಪಷ್ಟವಾದ ಅರಿವಿತ್ತು. ಆ ಅರಿವು ಕೇವಲ ಸಾಮಾಜಿಕ ನೆಲೆಯದು ಮಾತ್ರವಲ್ಲ, ಅದು ಧಾರ್ಮಿಕ ಮತ್ತು ಅಧ್ಯಾತ್ಮಿಕ ನೆಲೆಯದ್ದೂ ಕೂಡ ಆಗಿತ್ತು. ಧಾರ್ಮಿಕ ಜಗತ್ತು ಸದಾ ಬಡವರ ಬಗ್ಗೆ ಮಾತನಾಡುವ ನಾಟಕವಾಡಿ ಆಂತರ್ಯದಲ್ಲಿ ಅದು ಶ್ರೀಮಂತರ ಮತ್ತು ಆಳುವ ವರ್ಗದ ಅನುಕೂಲಕರ ನಡೆಯನ್ನು ನಿರ್ವಹಿಸುತ್ತಿತ್ತು. ಬಡವರ ಸಂಕಟ ನಿವಾರಣೆಗಾಗಿ ಶ್ರೀಮಂತರ ಮತ್ತು ಆಳುವ ವರ್ಗದ ಮನೋಧರ್ಮವನ್ನು ಪರಿವರ್ತಿಸಿ ಸಮಾನತೆಯ ಕಡೆ, ಮಾನವತೆಯ ಕಡೆ ತುಡಿಯುವಂತೆ ಮಾಡುವ ಬದಲು ಶ್ರಮಿಕರ– ಬಡವರ ದುಡಿಮೆಯ ಫಲವನ್ನು ಭೋಗಿಸುವ ಮತ ಮೌಢ್ಯ ಹುಸಿ ನಂಬಿಕೆಗಳ ನಿರ್ಮಾಣ ಮಾಡುವುದರಲ್ಲಿ ತಲ್ಲೀನವಾಯಿತು. ಅದಕ್ಕಾಗಿ ಪಾಪ– ಪುಣ್ಯ, ಸ್ವರ್ಗ– ನರಕ ಪರಿಕಲ್ಪನೆಗಳನ್ನು ನೇಯಲಾಯಿತು. ಪುಣ್ಯ ಸಂಚಯದ ಫಲವಾಗಿ ಸ್ವರ್ಗದಲ್ಲಿ ದಕ್ಕಬಹುದಾದ ಸುಖದ ಪಟ್ಟಿಯನ್ನು ಬಣ್ಣ ಬಣ್ಣವಾಗಿ ನೆಯ್ದು ಈ ಭುವಿಯ ವಾಸ್ತವದ ನರಕದ ಬದುಕನ್ನು ಭ್ರಮೆಯಲ್ಲಿ ಮರೆಯುವಂತೆ ಮಾಡಲಾಯಿತು. ಈ ವಂಚನೆ ಶೋಷಕ ವರ್ಗವಾದ ಪ್ರಭುಗಳು– ಭೂಮಾಲೀಕರಿಗಿಂತ ಕ್ರೂರವಾದುದು. ಏಕೆಂದರೆ ಸಮಾಜದ ಬಹುಪಾಲು ವರ್ಗವನ್ನು ಅಜ್ಞಾನದಲ್ಲಿರುವಂತೆ ಪ್ರಜ್ಞಾಪೂರ್ವಕ ಎಚ್ಚರವಹಿಸಿರುವುದು ಇದರಿಂದ ವ್ಯಕ್ತವಾಗುತ್ತದೆ. ಇದೊಂದು ವಂಚನೆ, ಮೋಸ, ಸಾಮಾಜಿಕ ದ್ರೋಹ. ಈ ದ್ರೋಹದ ಹುನ್ನಾರಗಳು ಸಮಾಜದ ಕೆಳವರ್ಗದಿಂದ ಬಂದಿರುವ ದೇವರ ದಾಸಿಮಯ್ಯನ ಅರಿವಿಗೆ ಬಂದಿತ್ತು. ಈ ಅರಿವಿನಲ್ಲಿ ವಾಸ್ತವದ ಚಿತ್ರಣವಿರುವಂತೆ ವಿಷಾದದ ಛಾಯೆಯೂ ಇದೆ.

ದೇವರ ದಾಸಿಮಯ್ಯ ಹಸಿವನ್ನು ವಿಷಕ್ಕೆ ಹೋಲಿಸುತ್ತಾನೆ. ಇದು ಏಕಾ ಏಕಿ ಕೊಲ್ಲುವ ವಿಷವಲ್ಲ. ಇದು ಕೇವಲ ಬಸುರನ್ನು ಸಂಕಟಕ್ಕೆ ಗುರಿ ಮಾಡುವುದಿಲ್ಲ, ಆಪಾದ ಮಸ್ತಕಕ್ಕೆ ಏರುವ ಸಂಕಟದ ನಂಜು. ಇದು ಬುದ್ಧಿಭಾವಗಳನ್ನು ವಿವೇಕ ಕಳೆದುಕೊಳ್ಳುವ ಸ್ಥಿತಿಗೆ ನೂಕುವಂಥ ಪ್ರವೃತ್ತಿ. ಅದರಿಂದಾಗಿಯೇ ಅವನ ಮಾತಿನಲ್ಲಿ ಒಂದು ಬಗೆಯ ನಿರಾಸೆ, ಅಸಹಾಯಕತೆ ವ್ಯಕ್ತವಾಗುತ್ತದೆ.

ಈ ಬಗೆಯ ಅಸಹಾಯಕತೆ ವರ್ತಮಾನದ ನಡೆಯಾಗಬಾರದು. ಒಂದು ವೇಳೆ ಅದೇ ಆಗುವುದಾದರೆ ಚಲನೆ ನಿಂತಿದೆಯೆಂದೇ ಅರ್ಥ.

■ ಶಿಕಾಕು

## ಮಾತೇ ಮುತ್ತು

★ ಕಡುಕೋಪ ಬಂದಾಗ ತಡೆದುಕೊಂಡವನೇ ಜಾಣ. ಸಹನೆ ಕಹಿ, ಆದರೆ ಅದರ ಫಲ ಸಿಹಿ.

–ಲೋಕೋಕ್ತಿ

★ ತೆಗೆದುಕೊಳ್ಳುವುದಕ್ಕಿಂತ ಮೊದಲು ಕೊಡು; ಅದರಿಂದ ನಿನಗೆ ಒಳ್ಳೆಯದೇ ಸಿಕ್ಕೀತು.

–ಸ್ವಾಮಿ ರಂಗನಾಥಾನಂದ

★ ದಾನ ಧರ್ಮ ಮಾಡುವ ಔದಾರ್ಯ ನಿಜಕ್ಕೂ ಶ್ಲಾಘನೀಯ. ಆದರೆ ತನ್ನ ಶಕ್ತಿಸಾಮರ್ಥ್ಯಗಳನ್ನು ಮೀರಿ ದಾನ ಮಾಡುವುದು, ಕೆಲವೊಮ್ಮೆ ಸಾಲ ಮಾಡಿಯಾದರೂ ಪರವಾಗಿಲ್ಲ, ಕೀರ್ತಿ ಸಂಪಾದನೆಗಾಗಿ ಚಂದಾ ನೀಡುವುದು– ಇವೆಲ್ಲಾ ಅಪಾಯಕರವಾದ ಹೆಜ್ಜೆಗಳು.

–ವೀರೇಂದ್ರ ಹೆಗ್ಗಡೆ

★ ಯೋಗ್ಯ ಕಾಲದಲ್ಲಿ ತನ್ನ ಕರ್ತವ್ಯವನ್ನು ಯಾವನು ಮಾಡುವುದಿಲ್ಲವೋ, ಭಯದ ಕಾಲದಲ್ಲಿ ಆತಂಕ ಪಡುವುದಿಲ್ಲವೋ– ಅಂಥವನು ಬಹುಬೇಗನೆ ರಾಜ್ಯ ಭ್ರಷ್ಟನಾಗುತ್ತಾನೆ, ಹುಲ್ಲುಕಡ್ಡಿಗೆ ಸಮನಾಗುತ್ತಾನೆ.

–ರಾಮಾಯಣ

★ ಮಾತಿನ ಬಲದಿಂದ ವೇದಂಗಳಾದುವಲ್ಲದೆ ವೇದ ಸ್ವಯಂಭುವಲ್ಲ ನಿಲ್ಲು; ಮಾತಿನ ಬಲದಿಂದ ಶಾಸ್ತ್ರಂಗಳಾದುವಲ್ಲದೆ ಶಾಸ್ತ್ರ ಸ್ವಯಂಭುವಲ್ಲ ನಿಲ್ಲು.

–ಅಂಬಿಗರ ಚೌಡಯ್ಯ

★ ಸ್ವೇಚ್ಛೆಯಾಗಿ ಬೆಳೆಯುತ್ತಿರುವ ಶತ್ರುವನ್ನು ಯಾವನು ಉದಾಸೀನ ಮಾಡುವನೋ, ಯಾವನು ಸೋಮಾರಿತನದಿಂದ ಕೂಡಿ ರೋಗವನ್ನು ಉದಾಸೀನ ಮಾಡುವನೋ– ಅವನು ಅದರಿಂದಲೇ ಕ್ರಮಕ್ರಮವಾಗಿ ಕೊಲ್ಲಲ್ಪಡುತ್ತಾನೆ.

–ಪಂಚತಂತ್ರ

★ ಬೊಮ್ಮವನು ಅರಿತವನು ಸುಮ್ಮನಾಗಿರಬೇಕು.

–ಮಹಲಿಂಗರಂಗ

★ ಕಾನೂನು ಕುದುರೆಗೆ ನೀರನ್ನು ತೋರಿಸುತ್ತದೆ, ಆದರೆ ನೀರನ್ನು ಕುಡಿಸುವುದಿಲ್ಲ.

–ರೂಸ್‌ವೆಲ್ಟ್

★ ಒಳ್ಳೆಯ ಶಿಕ್ಷಣದ ಉದ್ದೇಶವೆಂದರೆ ಜನರನ್ನು ಒಳ್ಳೆಯ ಕಾರ್ಯದ ಕಡೆಗೆ ಗಮನ ಹರಿಸುವಂತೆ ಮಾಡುವುದು, ಅಷ್ಟೇ ಅಲ್ಲ– ಒಳ್ಳೆಯ ಕಾರ್ಯಗಳಲ್ಲಿ ಆಸಕ್ತಿ ವಹಿಸುವಂತೆ ಮಾಡುವುದೂ ಆಗಿದೆ.

–ಡಾ.ಜಕೀರ್ ಹುಸೇನ್

★ ದೂರದ ವಸ್ತುವನ್ನು ಪಡೆಯಲು ಸತತ ಪ್ರಯತ್ನ ಪಡುವವನು ವಿವೇಕಶಾಲಿ.

–ಸರೋಜಿನಿ ನಾಯ್ಡು

★ ಬರಲಿರುವ ಸನ್ನಿವೇಶಗಳನ್ನು ಸದಾ ನಿಮ್ಮ ಪರವಾಗಿ ಇಟ್ಟುಕೊಳ್ಳುವುದು ಜಾಣತನ.

–ವಿ.ಕೃ.ಗೋಕಾಕ್

★ ಸುಳ್ಳು ಮೋಸ ಮಾಡುವವನಿಗೆ ದೊಡ್ಡ ಶಿಕ್ಷೆ ಎಂದರೆ ಅವನನ್ನು ಯಾರೂ ನಂಬುವುದಿಲ್ಲ ಎಂದಲ್ಲ, ಅವನು ಯಾರನ್ನೂ ನಂಬಲಾಗುವುದಿಲ್ಲ ಎಂಬುದು.

–ಕೀಟ್ಸ್

★ ಶುದ್ಧಚಾರಿತ್ರ್ಯದ ಎದುರು ವಿದ್ಯೆಯ ಬೆಲೆ ಕಮ್ಮಿ.

–ಪ್ರೇಮ್‌ಚಂದ್